doc-394
T.P-2

(1)

Reg R G No. 155 19 10-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅವರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳವಿ ತಿಂಗಳಿಗೆ ಚಂದಾ 40 ಪೈಸೆ
ಚಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಪಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎನ್. ಕೃಷ್ಣರಾವ್ [2 ಪೈಸೆ

❁ ಬೆಂಗಳೂರು ಕಾರ್ಪೊರೇಷನ್ ಚುನಾವಣೆ ಪರಿಶೀಲನೆ ❁

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೀಗನೇ ನೆರೆವೇರಿಸಲ್ಪಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಭಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅವರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ವಿದ್ಯಾರ್ಥಿಗಳ ಒತ್ತಾಯ

ಸಿಂಗ್ಪುರ ಜೈಲಿನಲ್ಲಿ ಇಬ್ಬರು ಇಂಡೋನೇಷಿಯ ನೌಕಾದಳದವರಿಗೆ ಮರಣದಂಡನೆ ಜಾರಿ ಮಾಡಿದ್ದಕ್ಕೆ ಇಂಡೋನೇಷಿಯ ವಿದ್ಯಾರ್ಥಿಗಳು ತಮ್ಮ ಪ್ರತಿಭಟನೆಯನ್ನು ಯುದ್ಧ ಹೂಡಿ ಸಿಂಗ್ಪುರವನ್ನು ಚೂರು ಚೂರು ಮಾಡಲು ಕರೆ ಇತ್ತಿರುವರು

ಬಾಲಕನ ಮ್ಯೂಜಿಯಂ

ಲೆಯಾನಬರ್ಗ್ (ಡಾಡ್)- 14 ವರ್ಷ ವಯಸ್ಸಿನ ಹೆಂಡ್ರಿಕ್ ಕ್ಲೀ ಎಂಬ ವಿದ್ಯಾರ್ಥಿ ತನ್ನ ವಿರಾಮ ಕಾಲದಲ್ಲಿ ಅಪರೂಪವಾದ ಮತ್ತು ಪುರಾತನ ವಸ್ತುಗಳನ್ನು ಸಂಗ್ರಹಿಸಿ ಆ ಸಂಗ್ರಹಶಾಲೆಗೆ ತಾನೇ ಡೈರೆಕ್ಟರಾಗಿದ್ದಾನೆ – ಸುಮಾರು 1 ಮಿಲಿಯ ವರ್ಷಗಳ ಹಿಂದಿನ ಆನೆಯ ಮೇಲ್ದವಡೆಯ ಅವಶೇಷವೂ ಒಂದಿದೆ.

★

ಭಾರತೀಯರ ಕೊಲೆ

ದೌರ್ಜನ್ಯ ನಾಗಾಗಳು ಸೆಪ್ಟಂಬರಿನಲ್ಲಿ ಮೂವರು ಭಾರತ ರಕ್ಷಣಾ ಪಡೆ ಅಧಿಕಾರಿಗಳನ್ನು ಕೊಂದಿರುವರು.

★

ದೇಶದಿಂದ ಹೊರಕ್ಕೆ

ನ್ಯೂಯಾರ್ಕ್ ಟೈಂಸ್ ಸುದ್ದಿಗಾರ ರೇಮಾಂಡ್‌ರನ್ನು ದೇಶದಿಂದ ಹೋಗುವಂತೆ ರಷ್ಯ ಆಜ್ಞೆ ಮಾಡಿದೆ

ಮುಷ್ಕರಿಸಿದವರಿಗೆ ಕರುಣೆ

ನವದೆಹಲಿ— ಸೆಪ್ಟಂಬರು 19 ರಂದು ಕೆಲಸಕ್ಕೆ ಬಾರದಿದ್ದ ಕೇಂದ್ರ ಸರ್ಕಾರೀ ನೌಕರರಿಗೆ ಕೊಟ್ಟಿದ್ದ ಕೆಲಸದಿಂದ ವಜಾ ಮಾಡುವ ನೋಟೀಸನ್ನು ಸರ್ಕಾರ ವಾಪಸ್ಸು ಪಡೆಯಲು ನಿರ್ಧರಿಸಿತು – ಹಂಗಾಮಿ ನೌಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ — 8 ದಿನಗಳಿಂದ ಉಪವಾಸ ನಡೆಸುತ್ತಿರುವ 4 ಮಂದಿ ಕೇಂದ್ರ ಸರ್ಕಾರಿ ನೌಕರರ ನಾಯಕರು ಉಪವಾಸ ನಿಲ್ಲಿಸಿದರು.

★

ಪಾಕಿಸ್ತಾನಕ್ಕೆ ಟ್ಯಾಂಕುಗಳು

ವಾಷಿಂಗ್ಟನ್— ಪಾಪಸ್ತಾನವು ಪಟ್ಟು ಟ್ಯಾಂಕುಗಳನ್ನು ಹೊರಗಡೆ ಕೊಳ್ಳಲು ಅಮೇರಿಕಾ ಸಹಾಯ ಮಾಡಲು ಪ್ರಯತ್ನಿಸುತ್ತಿದೆ – ಪಾಪಸ್ತಾನಕ್ಕೆ ಈಗ 100 ಟ್ಯಾಂಕುಗಳೂ, ಆಮೇಲೆ 100 ಟ್ಯಾಂಕುಗಳೂ ಬೇಕಾಗಿವೆಯಂತೆ

ತಾಷ್ಕಾಂಟು ಉತ್ಸವ

ರಷ್ಯಾದ ತಾಷ್ಕಾಂಟಿನಲ್ಲಿ ಅಕ್ಟೋಬರು 21 ರಿಂದ ಪ್ರಾರಂಭವಾಗು ಪ್ರಥಮ ಅಂತರಾಷ್ಟ್ರೀಯ ಚಲಚ್ಚಿತ್ರೋತ್ಸವವು 10 ದಿನಗಳು ನಡೆಯುವುದು – ಇದರಲ್ಲಿ ಭಾರತ ಮತ್ತು ಜಪಾನ್ ಸೇರಿ 33 ದೇಶಗಳು ಭಾಗವಹಿಸುವವು.

ಕಾರ್ಪೊರೇಷನ್ ಚುನಾವಣೆ

ಬೆಂಗಳೂರು— ನಗರ ಕಾರ್ಪೊರೇಷನ್ ಚುನಾವಣೆಯನ್ನು ಸಾಧ್ಯವಾದಷ್ಟು ಬೇಗ ನಡೆಸಬೇಕೆಂದು ಎಂ ಪಿ ಸಿ ಸಿ ಸದಸ್ಯ ಶ್ರೀ ವಿ. ಆರ್. ನಾಯಿಡುರವರ ವಿನಂತಿಯನ್ನು ಅನುಕೂಲವಾಗಿ ಪರ್ಯಾಲೋಚಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿರುವದಾಗಿ ಗೊತ್ತಾಗಿದೆ.

ಗ್ರಾಂಟು

ನವದೆಹಲಿ— ಬೆಂಗಳೂರು ವ್ಯವಸಾಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಫೋರ್ಡ್ ಫೌಂಡೇಷನ್ ರೂ. 2167500 ಗ್ರಾಂಟ್ ಕೊಟ್ಟಿದೆ.

ಪ್ರತಿಭಟನೆ

ಕಲ್ಲೀಕೋಟೆ— ಮುಸ್ಲಿಂ ಬಹುಸಂಖ್ಯಾತ ಜಿಲ್ಲೆ ಸ್ಥಾಪನೆಗೆ ಪ್ರತಿಭಟಿಸಿ 600 ಮಂದಿ ನಿನ್ನೆ ಕಲೆಕ್ಟರು ಆಫೀಸಿನ ಮುಂದೆ ಧರಣ ಮಾಡಿದರು

ಜಾಕಲೈನ್ ಪುನರ್ವಿವಾಹ

ಅಂಡ್ರವಿಧ (ಗ್ರೀಸ್)— ಅಮೇರಿಕದ ಮಾಜಿ ಅಧ್ಯಕ್ಷ ದಿ || ಕೆನಡಿಯವರ ಪತ್ನಿ ಜಾಕೊರ್ಲೈನ್ ಗ್ರೀಸಿನ ಹಡಗ್ಗುಗಳ ಕೋಟ್ಯಾಧೀಶ್ವರ ಓನಾಸಿಸ್ಸನು ವಿವಾಹವಾಗಲು ಇಲ್ಲಿಗೆ ಬಂದರು

ಪಾಕಿಸ್ತಾನಿಗಳ ಹಾವಳಿ

ಜಮ್ಮು— ಚಂಬಾ ಸೆಕ್ಟರಿನಲ್ಲಿ ನುಗ್ಗಿ ಬಂದ ಪಾಕಿಸ್ತಾನಿ ತಂಡದ ಗುಂಡಿನೇಟಿನಿಂದ ಒಬ್ಬ ಭಾರತೀಯನು ಮಡಿದನು.

ಮೈಸೂರು ದಸರಾ ವಸ್ತುಪ್ರದರ್ಶನ 1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ 20 ನೇ ಭಾನುವಾರ ಅಕ್ಟೋಬರ್ 1968

ಸಂಜೆ 7 ಘಂಟೆಗೆ

ಸುಪ್ರಸಿದ್ಧ ಚಲನಚಿತ್ರ ತಾರೆ

ಶ್ರೀಮತಿ ಎಂ. ಎಸ್. ಲಕ್ಷ್ಮೀದೇವಿಯವರ ತಂಡದವರಿಂದ

ಆರಾಧನ

ಎಂಬ ನಾಟಕವನ್ನು ಅಭಿನಯಿಸುವರು.

ತಾರಾಗಣ : ಶ್ರೀಮತಿಯರಾದ ಎಂ. ಎಸ್. ಲಕ್ಷ್ಮೀದೇವಿ, ಬಿ. ಜಯ, ಎಸ್. ಸರೋಜಮ್ಮ, ಜಯಮ್ಮ, ಕಲಾವತಿ, ಸಿ. ಎಸ್. ಸರೋಜಿನಿ ಪಟ್ಟಾಭಿ
ಶ್ರೀಯುತರಾದ ಟಿ. ಎಸ್. ಬಾಲಕೃಷ್ಣ, ಹೆಚ್. ಆರ್. ಶಾಸ್ತ್ರಿ, ಬಿ. ಗುರುರಾಜ್, ಜೀಕನ್, ಶ್ಯಾಮಸುಂದರ್, ಟಿ. ಆರ್. ನಾರಾಯಣ,
ಮಾಸ್ಟರ್ ಚಂದ್ರಶೇಖರ್.

ಪ್ರವೇಶದರ 50 ಪೈಸೆ

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಕೆಲವರು ಈಸಾಯಿಗಳಿಗೆ ಮತ್ತು ಮುಸ್ಲಿಂರಿಗೆ ಒಂದೇ ದೇವರು, ಒಂದೇ ಧರ್ಮಗ್ರಂಥ, ಒಬ್ಬನೇ ಪ್ರವಾದಿ ಇರುವದರಿಂದ ಅವರಲ್ಲಿ ಒಗ್ಗಟ್ಟಿಗೆ ; ಹಿಂದುಗಳಲ್ಲಿಯಾದರೋ ದೇವತೆಗಳು ಮೂವತ್ತು ಮೂರು ಕೋಟಿ, ಅನೇಕ ಧರ್ಮಗ್ರಂಥಗಳು ಅನೇಕ ಮತಾಚಾರ್ಯರು ಇರುವುದರಿಂದ ಒಗ್ಗಟ್ಟಿಲ್ಲದೇ ಸಮಾಜ ಶಿಥಿಲಗೊಂಡು ದಾಸ್ಯಕ್ಕೆ ಒಳಗಾಗಬೇಕಾಯಿತೆಂದು ಹೇಳುತ್ತಾರೆ. ಇದು ಹಿಂದೂಧರ್ಮವನ್ನು ತಿಳಿಯದ ಅಜ್ಞಾರ ಮಾತೇ ಹೊರತು ಜ್ಞಾನಿಗಳು ಎಂದೂ ಆ ರೀತಿ ಹೇಳುವುದಿಲ್ಲ

ಹಿಂದುಗಳಿಗೆ ಇರುವುದು ' ವೇದ " ಎಂಬ ಒಂದೇ ಧರ್ಮಗ್ರಂಥ. ಅದರಲ್ಲಿ ಹೇಳಿರುವ ಧರ್ಮವನ್ನು ಜನರಿಗೆ ಸುಲಭವಾಗಿ ತಿಳಿಸುವ ಸಲುವಾಗಿಯೇ ನೂರೆಂಟು ಜನ ಋಷಿಗಳು ನೂರೆಂಟು ಸ್ಮೃತಿಗಳನ್ನು ರಚಿಸಿದರು. ಸರಳವಾಗಿ ಸೂಚಿಸುವ ಸಲುವಾಗಿಯೇ ' ಧರ್ಮ ಸೂತ್ರ " ಮತ್ತು ' ಬ್ರಹ್ಮ ಸೂತ್ರ " ಗಳನ್ನು ಜೈಮಿನಿ ಮತ್ತು ಬಾದರಾಯಣಾಚಾರ್ಯರು ರಚಿಸಿದರು. ಆ ಧರ್ಮವನ್ನು ಆಚರಿಸುವವರ ಕಥೆಯೇ ಇತಿಹಾಸ ಮತ್ತು ಪುರಾಣಗಳಲ್ಲಿ ಇರುವುದು.

MYSORE DASARA EXHIBITION 1968.

Applications are invited for the following competitions (both Gents and Ladies) to be held at the Exhibition Buildings, Mysore.

Sl. No.	Events.	Date of competition	Time.	Fees for Junior grade below 18 years	Fees for Senior grade 18 years & above.
1.	Music Vocal	21-10-68	9.00 a.m.	Rs.2/-	Rs.3/-
2.	Music (Instrumental)	23-10-68	9.00 a.m.	Rs.2/-	Rs.3/-
3.	Dance	25-10-68	9.00 a.m.	2/-	3/-
		25-10-68‡			
4.	Fancy Dress‡ (Gents only)‡	26-10-68	6-30p.m.	2/-	3/-
		27-10-68‡			

Last date of receipt of applications is 20-10-68 before 5-00 p. m. Late applications will not be entertained.

R. Rajanna
Sd. SECRETARY

Cow Slaughter should be banned Immediately

★

Help The Gorakshana

Edited, Printed & Published by Dharmapracharo Nirata M S Krishna Rao (Proprietor) at the Satyavadi Press Chamarajapuram, Mysoe 4

ವುಡ್‌ಲಾಂಡ್ಸ್

ಜನಪ್ರಿಯ 6 ನೇ ವಾರ

ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ನೀಲ್ ಕಮಲ್ ★ Neel Kamal

.... ಮಿಲಿಯಗಟ್ಟಲೆ ಖರ್ಚಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್ ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಿಶಿಕಲಾ, ಮಹಮೂದ್

ಆಪೆರ—

ಜನಭರಿತ 2 ನೇ ವಾರ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Protect the Cow



ಗೋರಕ್ಷಣೆ ಮತ್ತು ವಾಣಿದಯಾ ಕಾರ್ಯಗಳು ಹೆಚ್ಚಿ ಚಾಲ್ತಿಗೆ ನಡೆಯಲಿ